ಇ) ವಿಡಿಯಾ ಲಿಮಿಟೆಡ್‌ರವರು ತಮ್ಮ ಕಾರ್ಖಾನೆಗೆ ವಿದ್ಯುತ್ ಲೈನನ್ನು ತಾವೇ ಸ್ವಯಂ ನಿರ್ವಹಿಸುತ್ತಿರುವಾಗ ಈ ಅಪಘಾತ ಸಂಭವಿಸಿರುತ್ತದೆ. ಆದುದರಿಂದ ಅಪಘಾತದಲ್ಲಿ ಮೃತಪಟ್ಟವರಿಗೆ ವಿಡಿಯಾ ಲಿಮಿಟೆಡ್‌ರವರೇ ಪರಿಹಾರ ನೀಡಬೇಕಾಗಿರುವುದರಿಂದ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು ಪರಿಹಾರವನ್ನು ನೀಡುವ ಪ್ರಶ್ನೆಯು ಉದ್ಭವಿಸುವುದಿಲ್ಲ.

ವಿದ್ಯುತ್ ಕೊರತೆ ಮತ್ತು ಉತ್ಪಾದನೆ

5024 - ಶ್ರೀ ಅಮರೇಗೌಡ ಬಯ್ಯಾಪುರ ಲಿಂಗನಗೌಡ (ಲಿಂಗಸಗೂರು) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಷ್ಟ್ರದಲ್ಲಿಯೇ ಪ್ರಪ್ರಥಮವಾಗಿ ಜಲವಿದ್ಯುತ್ ಉತ್ಪಾದನೆ ಮಾಡಿದ ರಾಜ್ಯ ಕರ್ನಾಟಕವಾದರೂ ಇಂದು ವಿದ್ಯುತ್ ಕೊರತೆಯಿಂದ ಬಳಲುತ್ತಿರುವುದು ನಿಜವಲ್ಲವೇ? ಹಾಗಿದ್ದಲ್ಲಿ, ಕೊರತೆಯ ಪ್ರಮಾಣವೆಷ್ಟು? ಮತ್ತು ಕೊರತೆಯನ್ನು ನೀಗಿಸಲು ಯಾವ ಯಾವ ಯೋಜನೆಗಳಿಂದ ವಿದ್ಯುತ್ತನ್ನು ಪಡೆಯಲಾಗುತ್ತಿದೆಯೇ? ಇದಕ್ಕಾಗಿ ಎಷ್ಟು ಹಣ ವ್ಯಯ ಮಾಡಲಾಗುತ್ತಿದೆ?*

ಆ) *ರಾಜ್ಯದ ಯಾವ ಯಾವ ಸ್ಥಳಗಳಲ್ಲಿ ಸಣ್ಣ ಪ್ರಮಾಣದಲ್ಲಿ ಜಲ ವಿದ್ಯುತ್ ಉತ್ಪಾದನೆ ಮಾಡಲು ಸಮೀಕ್ಷೆ ಕಾರ್ಯ ಕೈಗೊಳ್ಳಲಾಗಿದೆ. ಈ ಸ್ಥಳಗಳಲ್ಲಿ ಯಾವ ಪ್ರಮಾಣದಲ್ಲಿ ವಿದ್ಯುತ ಉತ್ಪಾದೆ ಮಾಡಬಹುದು? ಪ್ರತಿಯೊಂದು ಅಂದಾಜು ಖರ್ಚು ಎಷ್ಟು? ಇವುಗಳಲ್ಲಿ ಕೆಲವು ಸ್ಥಳಗಳ ವಿದ್ಯುತ್ ಉತ್ಪಾದನಾ ಕಾರ್ಯಗಳನ್ನು ಖಾಸಗೀ ಸಂಸ್ಥೆಗಳಿಗೆ ವಹಿಸಿಕೊಡಲು ಸರ್ಕಾರ ಇಚ್ಚಿಸಿದೆಯೇ ಹಾಗಿದ್ದಲ್ಲಿ ಕೈಗೊಳ್ಳಲಾಗಿರುವ ಕ್ರಮಗಳೇನು?*

ಇ) *ಕೈಗಾರಿಕಾ ವಲಯ ಮತ್ತು ಕೃಷಿ ವಲಯಕ್ಕೆ ಬಳಕೆಯಾಗುತ್ತಿರುವ ಒಟ್ಟು ವಿದ್ಯುತ್ ಪ್ರಮಾಣವೆಷ್ಟು? ಈ ಎರಡು ವಲಯಗಳಿಂದ ಸರ್ಕಾರಕ್ಕೆ ಪಾವತಿ ಮಾಡಬೇಕಾಗಿರುವ ವಿದ್ಯುತ್ ಬಾಕಿ ಹಣದ ಮೊತ್ತವೆಷ್ಟು?*

ಶ್ರೀ ವೀರಕುಮಾರ್ ಆ. ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ರಾಜ್ಯವು ವಿದ್ಯುತ್ ಕೊರತೆಯನ್ನು ಅನುಭವಿಸುತ್ತಿರುವುದು ನಿಜ. 2000-2001ರ ಸಾಲಿಗೆ ಸಂಬಂಧಿಸಿದಂತೆ ರಾಜ್ಯ ಅನಿರ್ಬಂಧಿತ ಬೇಡಿಕೆ ಸುಮಾರು 30,210 ದಶಲಕ್ಷ ಯೂನಿಟ್ಟುಗಳೆಂದು ಅಂದಾಜು ಮಾಡಲಾಗಿದೆ. ಪ್ರಸಕ್ತ ಸಾಲಿಗೆ ರಾಜ್ಯದಲ್ಲಿರುವ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ಹಾಗೂ ಇತರೆ ಮೂಲಗಳಿಂದ ಲಭ್ಯವಾಗುವ ಒಟ್ಟು ವಿದ್ಯುತ್ ಸುಮಾರು 28,300 ದಶಲಕ್ಷ ಯೂನಿಟ್ಟುಗಳೆಂದು ಅಂದಾಜು ಮಾಡಲಾಗಿದ್ದು, ಸುಮಾರು 1910 ದಶಲಕ್ಷ ಯೂನಿಟ್ಟುಗಳಷ್ಟು ವಿದ್ಯುತ್ತಿನ ಪ್ರಮಾಣದ ಕೊರತೆಯಾಗುವುದೆಂದು ಅಂದಾಜು ಮಾಡಲಾಗಿದೆ. ಈ ಕೊರತೆಯನ್ನು ನೀಗಿಸಲು ಹಲವಾರು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ವಿವರಗಳು ಕೆಳಕಂಡಂತಿವೆ.

1) ರಾಜ್ಯದಲ್ಲಿರುವ ಜಲವಿದ್ಯುತ್ ಮತ್ತು ಥರ್ಮಲ್ ವಿದ್ಯುತ್ ಉತ್ಪಾದನೆಯನ್ನು ಎಷ್ಟು ಸಾಧ್ಯವೋ ಅಷ್ಟು ಗರಿಷ್ಠ ಮಟ್ಟಕ್ಕೆ ಹೆಚ್ಚಿಸುವುದು.

2) ಕೇಂದ್ರ ಸರ್ಕಾರ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ಲಭ್ಯವಾಗುವ ರಾಜ್ಯದ ವಿದ್ಯುತ್ ಪಾಲಿನ ಜೊತೆಗೆ, ಹೆಚ್ಚುವರಿ ಪಾಲನ್ನು ಪಡೆಯಲು ಪ್ರಯತ್ನಿಸುವುದು. ಈ ದಿಶೆಯಲ್ಲಿ ಈಗಾಗಲೇ ಮಾರ್ಚ್ 2000ರಿಂದೀಚೆಗೆ ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಯೋಜನೆಯಾದ ನೈವೇಲಿಯಿಂದ ದಿನವಹಿ ಸರಾಸರಿ 1.0 ರಿಂದ 1.5 ದಶಲಕ್ಷ ಯೂನಿಟ್ ಹೆಚ್ಚುವರಿ ವಿದ್ಯುತ್ ಪಡೆಯಲಾಗುತ್ತಿದೆ.

3) ಪೂರ್ವ ವಲಯದಲ್ಲಿರುವ ಕೇಂದ್ರ ವಿದ್ಯುತ್ ಘಟಕಗಳಾದ ಎನ್.ಟಿ.ಪಿ.ಸಿ.ಯಿಂದ ದಿನವಹಿ ಸರಾಸರಿ 2.0 ರಿಂದ 2.5 ದಶಲಕ್ಷ ಯೂನಿಟ್‌ಗಳಷ್ಟು ವಿದ್ಯುತ್ತನ್ನು ಈಗಾಗಲೇ ಪಡೆಯುತ್ತಿರುವುದು.

4) ಖಾಸಗೀ ಕ್ಷೇತ್ರದಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ವಿದ್ಯುತ್ ಉತ್ಪಾದನೆ ಯೋಜನೆಗಳಾದ ಜಿಂದಾಲ್ ಟ್ರಾಕ್ಟ್ ಬೆಲ್ ಶಾಖೋತ್ಪನ್ನ ಯೋಜನೆ, ಕಿರು ಜಲ ವಿದ್ಯುತ್ ಮತ್ತು ಗಾಳಿ ಆಧಾರಿತ ವಿದ್ಯುತ್ ಹಾಗೂ ಕೋ-ಜನರೇಷನ್ ವಿದ್ಯುತ್ ಯೋಜನೆಗಳಿಂದ ವಿದ್ಯುತ್ತನ್ನು ಖರೀದಿಸುವುದು.

5) ನಿಗಮದಲ್ಲಿನ ವಿಸ್ತರಣೆ ಮತ್ತು ಅಭಿವೃದ್ಧಿ ಕಾರ್ಯಕ್ರಮದಡಿ ಪ್ರಸರಣೆ ಮತ್ತು ವಿತರಣೆಯಲ್ಲಿನ ನಷ್ಟವನ್ನು ಕಡಿಮೆ ಮಾಡುವ ದಿಶೆಯಲ್ಲಿ ನೂತನ ವಿದ್ಯುತ್ ಸಬ್ ಸ್ಟೇಶನ್‌ಗಳನ್ನು ಸ್ಥಾಪಿಸುವುದು ಹಾಗೂ ಹೊಸ ಪ್ರಸರಣ ಮಾರ್ಗಗಳನ್ನು ನಿರ್ಮಿಸುವುದು, ಈಗಿರುವ ಸಬ್-ಸ್ಟೇಷನ್‌ಗಳ ಹಾಗೂ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ಸಾಮರ್ಥ್ಯವನ್ನು ಹೆಚ್ಚಳಗೊಳಿಸುವುದು, ಮುಂತಾದ ವ್ಯವಸ್ಥಾ ಸುಧಾರಣಾ ಕ್ರಮಗಳಿಂದ ಕೊರತೆಯನ್ನು ನೀಗಿಸಲು ಪ್ರಯತ್ನವನ್ನು ಮಾಡಲಾಗುತ್ತಿದೆ.

ಕರ್ನಾಟಕ ವಿದ್ಯುತ್ ನಿಗಮ, ಕೇಂದ್ರ ಸರ್ಕಾರದ ವಿದ್ಯುತ್ ಯೋಜನೆ, ನೆರೆ ರಾಜ್ಯಗಳಿಂದ ಹಾಗೂ ಖಾಸಗಿ ಕ್ಷೇತ್ರದಿಂದ ಖರೀದಿಸಲಾದ ವಿದ್ಯುತ್ ಮತ್ತು ವಿಶ್ವೇಶ್ವರಯ್ಯ ವಿದ್ಯುತ್ ನಿಗಮ ನಿಯಮಿತ ಸಂಸ್ಥೆಯಿಂದ ದೊರಕಿದ ವಿದ್ಯುತ್ ಇವುಗಳ ಬಗ್ಗೆ 1999-2000ರ ಸಾಲಿನಲ್ಲಿ ಕವಿಪ್ರನಿನಿಗೆ ತಗುಲಿದ ವೆಚ್ಚ ಸುಮಾರು 2731 ಕೋಟಿ ರೂ.ಗಳು.

ಆ) ರಾಜ್ಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ನೇತ್ರಾವತಿ ನದಿಯಲ್ಲಿ ಸಮೀಕ್ಷೆ ಕಾರ್ಯ ಕೈಗೊಳ್ಳಲಾಗಿದೆ. ಈ ಕಾರ್ಯವು ಇನ್ನೂ ಸಂಪೂರ್ಣವಾಗಿಲ್ಲದೇ ಇರುವುದರಿಂದ ವಿವರಗಳು ದೊರಕುವುದಿಲ್ಲ.

ಇ) 1999-2000ನೇ ಸಾಲಿಗೆ ಸಂಬಂಧಿಸಿದಂತೆ ಬಳಕೆಯಾದ ವಿದ್ಯುತ್ ಹಾಗೂ 31.8.2000ದ ಅಂತ್ಯಕ್ಕೆ ಇರುವ ವಿದ್ಯುತ್ ಬಾಕಿ ಮೊಬಲಗು (ಪ್ರಸಕ್ತ ಸಾಲಿನ ಡಿಮ್ಯಾಂಡ್ ಸೇರಿದಂತೆ) ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ವಿವರಗಳು	ಬಳಕೆಯಾದ ವಿದ್ಯುತ್ ದಶಲಕ್ಷ ಯೂನಿಟ್‌ಗಳಲ್ಲಿ	31.8.2000ದ ಅಂತ್ಯಕ್ಕೆ ಬಾಕಿ (ಕೋಟಿ ರೂ. ಗಳಲ್ಲಿ)
1.	ಕೈಗಾರಿಕಾ ವಲಯ	3,495	545.13
2.	ಕೃಷಿ ವಲಯ (ನೀರಾವರಿ ಪಂಪುಸೆಟ್ಟುಗಳು)	6,309	461.97
		ಒಟ್ಟು	**1007.10**

ಕೃಷ್ಣ ಮೇಲ್ದಂಡೆ ಯೋಜನೆಯ ನೀರಾವರಿ ಸೌಲಭ್ಯ

5025 - ಶ್ರೀ ಅಮರೇಗೌಡ ಬಯ್ಯಾಪುರ ಲಿಂಗನಗೌಡ (ಲಿಂಗಸಗೂರು) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೃಷ್ಣ ಮೇಲ್ದಂಡೆ ಯೋಜನೆಯ ಎಡ ಮತ್ತು ಬಲದಂಡೆ ಮುಖ್ಯ ಕಾಲುವೆಗಳ ಉದ್ದಳತೆ ಎಷ್ಟು? ಇವುಗಳ ರಚನೆಗಾಗಿ ಇಲ್ಲಿಯವರೆಗೂ ಎಷ್ಟು ಹಣ ವ್ಯಯ ಮಾಡಲಾಗಿದೆ?*

ಆ) *ಕೃಷ್ಣ ಮೇಲ್ದಂಡೆ ಯೋಜನೆಯ ಎಡಭಾಗದ ಮುಖ್ಯ ಕಾಲುವೆಯಿಂದ ಎಷ್ಟು ಎಕರೆಗೆ ನೀರಾವರಿ ಸೌಲಭ್ಯ ಕಲ್ಪಿಸಿ ಕೊಡಲಾಗಿದೆ? ಈ ಸೌಲಭ್ಯವನ್ನು ಪಡೆದುಕೊಂಡ ತಾಲ್ಲೂಕುವಾರು ಜಮೀನಿನ ವಿಸ್ತೀರ್ಣ ಎಷ್ಟು? ಉದ್ದೇಶಿತ ಜಮೀನಿನ ವಿಸ್ತೀರ್ಣಕ್ಕೆ ನೀರು ಪೂರೈಕೆಯನ್ನು ಮಾಡಲಾಗಿದೆಯೇ? ಹಾಗಿಲ್ಲದಿದ್ದಲ್ಲಿ ಕಾರಣಗಳೇನು?*

ಇ) *ಕೃಷ್ಣ ಮೇಲ್ದಂಡೆ ಯೋಜನೆಯ ಬಲದಂಡೆಯ ಮುಖ್ಯ ಕಾಲುವೆಯಿಂದ ಇಂದಿಗೂ ಒಂದು ಎಕರೆ ನೀರಿನ ಸೌಕರ್ಯ ಕಲ್ಪಿಸಲಾಗಿಲ್ಲ. ಈ ವಿಳಂಬಕ್ಕೆ ಕಾರಣಗಳೇನು? ಪ್ರಥಮ ಹಂತದಲ್ಲಿ ಈ ಕಾಲುವೆಯಿಂದ ಲಿಂಗಸಗೂರು ತಾಲ್ಲೂಕಿನ ಯಾವ ಯಾವ ಹಳ್ಳಿಗಳು ಯಾವ ಯಾವ ಬೆಳೆಗಳಿಗಾಗಿ ನೀರಿನ ಸೌಕರ್ಯ ಪಡೆಯಲಿವೆ?*

ಶ್ರೀ ಹೆಚ್.ಕೆ. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :

ಅ) ಅನುಬಂಧ-1ರಲ್ಲಿ ವಿವರಗಳನ್ನು ನೀಡಲಾಗಿದೆ.

ಆ) ನಾರಾಯಣಪುರ ಎಡದಂಡೆ ಕಾಲುವೆಯಿಂದ 229081.46 ಹೆಕ್ಟೇರ್ ಪ್ರದೇಶಕ್ಕೆ ಅಂದರೆ 5,65,708.20 ಎಕರೆಗೆ ನೀರಿನ ಸೌಲಭ್ಯ ಕಲ್ಪಿಸಿಕೊಡಲಾಗಿದೆ. ಇದಕ್ಕೆ ಈ ವರ್ಷ ಮುಂಗಾರು ಬೆಳೆಗಳಿಗೆ ನೀರನ್ನು ಬಿಡಲಾಗುತ್ತಿದೆ.